ಮುಖ್ಯವಾಗಿ ಅಲ್ಲಿ ಅವರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯಲ್ಲಿ ಕೆಲವು ತಿಂಗಳು ವ್ಯತ್ಯಾಸ ಬಂದಿರುವುದರಿಂದ ಅನುಮಾನ ಎಲ್ಲರಿಗೂ ಉಂಟಾಗಿದೆ. ಅದಕ್ಕೆ ಕಾರಣವೇನೆಂದರೆ ಅವರದೇ ಆದ ಒಂದು ದೊಡ್ಡ ಕ್ಯಾಪ್ಟೀವ್ ಜನರೇಟರ್ ಇದೆ. ಅವರು ಯಾವಾಗ ಹೆಚ್ಚು ಉತ್ಪಾದನೆ ಮಾಡಿಕೊಂಡಿದ್ದಾರೆ ಆಂತಹ ಸಂದರ್ಭದಲ್ಲಿ ವಿದ್ಯುತ್ ಮಂಡಲಿಯ ವಿದ್ಯುತ್ತನ್ನು ಕಡಿಮೆ ಉಪಯೋಗಿಸಿದ್ದಾರೆ. ಯಾವಾಗ ಅವರು ಇದನ್ನು ಕಡಿಮೆ ಉಪಯೋಗಿಸಿದ್ದಾರೆ ಅಂತಹ ಸಂದರ್ಭದಲ್ಲಿ ವಿದ್ಯುತ್ ಮಂಡಲಿಯ ವಿದ್ಯುತ್ತನ್ನು ಹೆಚ್ಚು ಉಪಯೋಗ ಮಾಡಿದ್ದಾರೆ. ಆದರಿಂದ ಕೆಲವು ಅನುಮಾನಗಳು ಬಂದು ಈ ರೀತಿಯ ದೂರುಗಳು ಬಂದಿರುತ್ತದೆಯೇ ಹೊರತು ಅಲ್ಲಿ ಯಾವುದೇ ವಿಧವಾದ ಅನುಮಾನಕ್ಕೆ ಆಸ್ಪದ ಇರುವುದಿಲ್ಲ. ನಾನೇ ಖುದ್ದಾಗಿ ಹೋಗಿ ಇದನ್ನು ಪರಿಶೀಲನೆ ಮಾಡಿದ್ದೇನೆ.

(ಪ್ರಶ್ನೆ ಸಂಖ್ಯೆ (೨೧೮೫) ಶ್ರೀ ಹೆಚ್. ಕೆ. ಕುಮಾರಸ್ವಾಮಿ ಸದಸ್ಯರು ಹಾಜರಿರಲಿಲ್ಲ.)

ಕೊಡಗು ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಬಗ್ಗೆ.

೨೧೮೬. ಶ್ರೀಮತಿ ಸುಭಾಷಿಣಿ (ವಿರಾಜಪೇಟೆ).— ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಸದರಿ ಕೈಗಾರಿಕಾ ಘಟಕಗಳು ಉಪಯೋಗಿಸುವ ಸ್ಥಳೀಯ ಕಚ್ಚಾ ವಸ್ತುಗಳಾವುವು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೩೩೫ ಘಟಕಗಳನ್ನು ನೊಂದಾಯಿಸಿದೆ. ಮಾಹಿತಿಯನ್ನು ಅನುಬಂಧ–೧ರಲ್ಲಿ ನೀಡಲಾಗಿದೆ.

ಆ) ಈ ಘಟಕಗಳು ಸ್ಥಳೀಯವಾಗಿ ಲಭ್ಯವಿರುವ ಕಾಫಿ ಬೀಜ, ಭತ್ತ, ಮರಮಟ್ಟುಗಳು, ಹಣ್ಣುಗಳು ಇತ್ಯಾದಿಗಳನ್ನು ಉಪಯೋಗಿಸುತ್ತಿವೆ.

ANNEXURE-I

LIST OF SSI UNITS REGISTERED IN KODAGU DISTRICT-TALUKWISE DURING THE YEARS 1985-86 TO 1987-88.

Sl. No.	Year	No. of SSI Units Registerred			Total
		Madikeri Taluk	Somwarpet Taluk	Virajpet Taluk	
1.	1985-86	34	45	38	117
2.	1986-87	37	46	32	115
3.	1987-88	43	35	25	103
		114	126	95	335

NOTE :

1 There are no medium scale industries registered in Kodagu District.

2 The above SSI units are using the local Raw-Material such as (1) Coffee Seeds for Coffee Curing Industry (2) Paddy for Rice and Flour Mills (3) Wood for Saw Mills and wood Industries (4) Egg, Chicken, Mutton and Pig for Cold Storage Industry.

ಶ್ರೀಮತಿ ಸುಮಾವಸಂತ.— ಸಣ್ಣ ಕೈಗಾರಿಕೆಗಳಲ್ಲಿ ಎಷ್ಟು ಶೆಡ್ಡುಗಳು ಇದೆ ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಷ್ಟು ಕೊಟ್ಟಿದ್ದೀರಿ ಮತ್ತು ಮಹಿಳೆಯರಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಅಲ್ಲದೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ಜೆ ಹೆಚ್ ಪಟೇಲ್.— ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಎಷ್ಟು ಕೊಟ್ಟಿದ್ದೇವೆ ಹಾಗೂ ಮಹಿಳಾ ಎಂಟರ್ ಪ್ರೈಸರ್ಸ್‌ಗೆ ಎಷ್ಟು ಕೊಟ್ಟಿದ್ದೇವೆ ಎಂಬುದರ ವಿವರ ನನ್ನ ಹತ್ತಿರ ಇಲ್ಲ. ತಾಲ್ಲೂಕುವಾರು ಎಷ್ಟು ಕೊಟ್ಟಿದ್ದೆವೆ ಎಂಬ ವಿವರ ಇದೆ. ಮಡಿಕೇರಿ ತಾಲ್ಲೂಕು ೧೧೪ ಯೂನಿಟ್ಸುಗಳು ಸೋಮವಾರಪೇಟೆ ೧೨೫, ವೀರಾಜಪೇಟೆ ೯೫ ಹೀಗೆ ಒಟ್ಟು ೩೩೫ ಸಣ್ಣ ಘಟಕಗಳನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರಿಯಂರು ಕೇಳಿದಂತ ವಿವರಗಳನ್ನು ನಂತರ ತಿಳಿಸುತ್ತೇನೆ. ಈಗ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀಮತಿ ಸುಮಾವಸಂತ್.—ಗೌರಿಬಿದನೂರಲ್ಲಿ ಏನಾದರೂ ಹೊಸ ಶೆಡ್ಡುಗಳನ್ನು ಕಟ್ಟುವ ಯೋಜನೆ ಇದೆಯೆ ? ಜಾಗ ಏನಾದರೂ ಅಕ್ವೈರ್ ಮಾಡಿಕೊಂಡಿದ್ದಿರಾ ?

ಶ್ರೀ ಜೆ.ಹೆಚ್. ಪಟೇಲ್.— ಈ ಬಗ್ಗೆ ಒಂದು ನೀತಿಯನ್ನು ರೂಪಿಸಿದ್ದೇವೆ. ಅವಶ್ಯಕ ಇದ್ದರೆ ಹೊಸ ಶೆಡ್ಡುಗಳನ್ನು ಕಟ್ಟುತ್ತೇವೆ. ಶೆಡ್ಡುಗಳನ್ನು ಕಟ್ಟುವುದಕ್ಕಿಂತ ಯಾರಾದರೂ ಬಂದು ಕೇಳಿದರೆ ಅವರಿಗೆ ನಾವು ಸಹಾಯ ಮಾಡಬಹುದು ಕೆಲವು ಕಡೆ ನಾವು ಶೆಡ್ಡುಗಳನ್ನು ಕಟ್ಟಿದರೆ ಅದು ಉಪಯೋಗ ಆಗುವುದಿಲ್ಲ. ಕೆಲವು ಕಡೆ ಡಿಮ್ಯಾಂಡ್ ಹೆಚ್ಚಿರುತ್ತದೆ. ಅಂತಹ ಕಡೆ ಲ್ಯಾಂಡ್ ಆಕ್ವೈರ್ ಮಾಡುತ್ತೇವೆಂದು ಯಾರಾದರೂ ಉದ್ದಿಮೆದಾರರು ಮುಂದೆ ಬಂದರೆ ಅವರು ಅದನ್ನು ಕೊಂಡು ಕಟ್ಟಿಕೊಳ್ಳಲು ಬೇರೆ ರೀತಿಯ ಹಣ ಸಹಾಯ ಮತ್ತು ನಿವೇಶನವನ್ನು ಒದಗಿಸುತ್ತೇನೆ. ಈ ರೀತಿ ಮಾಡಬೇಕೆಂಬ ಆಲೋಚನೆ ಇದೆ. ಶೆಡ್ಡಿನ ಅವಶ್ಯಕತೆ ನೋಡಿ ತೀರ್ಮಾನ ಮಾಡುತ್ತೇವೆ.

೧೨-೩೦ ಪಿ.ಎಂ.

ಮುಂದೂಡಲಾದ ಪ್ರಶ್ನೆಗಳು

ಪ್ರಶ್ನೆ ನಂ. ೧೨೩೨

ಶ್ರೀ ಕೆ. ಎಚ್. ಶ್ರೀನಿವಾಸ್.—ನನಗೆ ಅದರ ಉತ್ತರ ಬಂದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಉತ್ತರ ನನ್ನಲ್ಲಿದೆ. ಅದರ ಬಹಳ ದೊಡ್ಡ ಪಟ್ಟಿಯೇ ಇದೆ. ಅದನ್ನು ಅವರೆಗೆ ಕೊಟ್ಟರೆ ಮಾತ್ರ ಸಹಾಯವಾಗುತ್ತದೆ. ಹೆಚ್ಚು ಪ್ರತಿಗಳು ನನ್ನಲ್ಲಿಲ್ಲ.

ಅಧ್ಯಕ್ಷರು.—ಹಾಗಾದರೆ ನಾಳೆ ಇದನ್ನು ತೆಗೆದುಕೊಳ್ಳಬಹುದಾ?

ಶ್ರೀ ಜೆ.ಎಚ್. ಪಟೇಲ್.—ಆಗಬಹುದು.

ಶ್ರೀ ಕೆ.ಎಚ್. ಶ್ರೀನಿವಾಸ್.—ಅಬ್ಬಾರಿ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಆ ವಿವರಗಳು ನನಗೆ ಬೇಕು.

ಶ್ರೀ ಜೆ.ಎಚ್. ಪಟೇಲ್.—ಆಗಬಹುದು.

ಶ್ರೀ ಎ.ಬಿ. ದೇಸಾಯಿ.—ಗೈರು ಹಾಜರಿ.